# ತೆಂಗು ಬೆಳೆಯ ಸುಧಾರಿತ ಬೇಸಾಯ ಕ್ರಮಗಳು

'ಕಲ್ಪವೃಕ್ಷ' ವೆನಿಸಿಕೊಂಡಿರುವ ತೆಂಗು ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳಲ್ಲೊಂದು. ಇದು ಆಹಾರ (ಎಣ್ಣೆ), ಒಣಕೊಬ್ಬರಿ, ಪಾನೀಯ ಮತ್ತು ಉರುವಲು ವಸ್ತುಗಳನ್ನು ಒದಗಿಸುವುದಲ್ಲದೇ ಹಲವಾರು ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುವುದು. ಕೊಬ್ಬು ಮತ್ತು ಹಲವು ಜೀವಸತ್ವಗಳನ್ನು ಹೊಂದಿರುವುದರಿಂದ ಪಿಷ್ಟಯುಕ್ತ ಆಹಾರ ಪದಾರ್ಥಗಳಲ್ಲಿಯ ಕೊರತೆಗಳನ್ನು ಸರಿದೂಗಿಸುತ್ತದೆ. ತೆಂಗು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ವಾಣಿಜ್ಯ ಬೆಳೆಯಾಗಿದ್ದು, ಜಿಲ್ಲೆಯಾದ್ಯಂತ ಸುಮಾರು 21772 ಹೆಕ್ಟೇರು ಪ್ರದೇಶದಲ್ಲಿ ಬೆಳೆಯುತ್ತಿದ್ದು ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ಸುಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

**ಮಣ್ಣು:** ತೆಂಗನ್ನು ವಿವಿಧ ಮಣ್ಣುಗಳಲ್ಲಿ ಬೆಳೆಯಬಹುದಾದರು ನೀರು ಬಸಿದು ಹೋಗುವ ಆಳವಾದ ಮರಳು ಮಿಶ್ರಿತಗೋಡು, ಜಂಬಿಟ್ಟಿಗೆ ಮತ್ತು ಕೆಂಪು ಗೋಡು ಮಣ್ಣುಗಳು ಬೆಳೆಯಲು ಯೋಗ್ಯವಾಗಿವೆ. ರಸಸಾರ 5.2 ರಿಂದ 8.0 ಇರುವ ಮಣ್ಣಿನಲ್ಲಿಯೂ ತೆಂಗನ್ನು ಬೆಳೆಯಬಹುದು.

**ಹವಾಗುಣ:** ತೆಂಗು ಉಷ್ಣವಲಯದ ಬೆಳೆಯಾಗಿದ್ದು, ಹೆಚ್ಚು ಪ್ರಕಾಶ ಮಾನವಾದ ಬೆಳಕನ್ನು ಬಯಸುತ್ತದೆ. ಸಮುದ್ರ ಮಟ್ಟದಿಂದ 1000 ಮೀ.ಎತ್ತರದವರೆಗೂ, ವರ್ಷವಿಡೀ ಸಮಾನ ಹಂಚಿಕೆಯಲ್ಲಿ ಬೀಳುವ ಮಳೆ (700 ಮಿ.ಮೀ.) ಮತ್ತು ಉಷ್ಣಾಂಶ 15 ಡಿಗ್ರಿ ಸೆಂ. ರಿಂದ 35 ಡಿಗ್ರಿ ಸೆಂ. ಇರುವ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯಬಹುದು. ಉತ್ತಮ ಇಳುವರಿಗೆ ಬೇಸಿಗೆ ಕಾಲದಲ್ಲಿ ನೀರಾವರಿ ಅತ್ಯಗತ್ಯ.

**ಬಿತ್ತನೆಕಾಲ :** ನಾಟಿ ಮಾಡಲು ಜೂನ್ – ಜುಲೈ ತಿಂಗಳುಗಳು ಸೂಕ್ತ ಕಾಲ.

**ತಳಿಗಳು: ಸುಧಾರಿತ ಎತ್ತರದ ತಳಿಗಳು:**

1. **ಚಂದ್ರಕಲ್ಪ (ಲಕಡೀವ್ ಆರ್ಡಿನರಿ):**ಈ ತಳಿಯು ಕಲ್ಪರಸ ತೆಗೆಯಲು ಮತ್ತು ಉಂಡೆಕೊಬ್ಬರಿ ಪಡೆಯಲು ಉತ್ತಮವಾದ ಬರ ನಿರೋಧಕ ತಳಿ. ಕರಾವಳಿ ಮತ್ತು ಮೈದಾನ ಪ್ರದೇಶಗಳಲ್ಲಿ ಉತ್ತಮ ಫಲಿತಾಂಶ ತೋರಿದೆ. ಪ್ರತಿ ಮರದಿಂದ 90 ರಿಂದ 100 ಕಾಯಿಗಳ ಇಳುವರಿ, ಪ್ರತಿ ಕಾಯಿಯಲ್ಲಿ 176 ಗ್ರಾಂ, ಹಾಗೂ ಮರ ಒಂದಕ್ಕೆ ಒಣಕೊಬ್ಬರಿ ವರ್ಷಕ್ಕೆ 17ಕಿ.ಗ್ರಾಂ ಮತ್ತು ಶೇ. 70 ರಷ್ಟು ಎಣ್ಣೆ ಅಂಶ ಕೊಡುವ ಶಕ್ತಿ ಹೊಂದಿದೆ.
2. **ಕಲ್ಪತರು :** ಸರಾಸರಿ 117 ಕಾಯಿಗಳನ್ನು ಮಳೆಯಾಶ್ರಯದಲ್ಲಿ ನೀಡುತ್ತದೆ. ಇದು ಬರನಿರೋದಕ, ಉಂಡೆಕೊಬ್ಬರಿಗೆ ಸೂಕ್ತವಾದ ತಳಿ. ಕೊಬ್ಬರಿ ಇಳುವರಿ ಪ್ರತಿ ಎಕರೆಗೆ 1.43 ಟನ್ ನಷ್ಟಿದೆ.
3. **ಕೀರಚಂದ್ರ (ಫಿಲಿಫೀನ್ ಆರ್ಡಿನರಿ):** ಪ್ರತಿ ಮರವೊಂದಕ್ಕೆ ಸರಾಸರಿ 110 ಕಾಯಿಗಳು ಹಾಗೂ 20.8 ಕಿ.ಗ್ರಾಂ ನಷ್ಟು ಕೊಬ್ಬರಿ ಇಳುವರಿ ದೊರೆಯುತ್ತದೆ. ಕೊಬ್ಬರಿಯಲ್ಲಿ ಶೇ. 66ರಷ್ಟು ಎಣ್ಣೆಯಂಶವಿರುತ್ತದೆ.

4. **ಕಲ್ಪಹರಿತ:** ಇದು ಎಳನೀರು ಹಾಗೂ ಕೊಬ್ಬರಿಗೆ ಸೂಕ್ತವಾದ ತಳಿ. ಈ ತಳಿಯು ನುಶಿ ಪೀಡೆ ನಿರೋಧಕ ಸಾಮರ್ಥ್ಯ ಹೊಂದಿದೆ. ಸರಾಸರಿ 118 ಕಾಯಿಗಳನ್ನು ಮಳೆಯಾಶ್ರಯದಲ್ಲಿ ಪಡೆಯಬಹುದು. ಎಕರೆಗೆ 1.48 ಟನ್ ಕೊಬ್ಬರಿ ಮತ್ತು 0.98 ಟನ್ ಎಣ್ಣೆಯನ್ನು ಪಡೆಯಬಹುದು.
5. **ಕಲ್ಪಶತಾಬ್ಧಿ:** ಈ ತಳಿಯು ಸಹ ಎಳನೀರು ಹಾಗೂ ಕೊಬ್ಬರಿಗೆ ಸೂಕ್ತವಾಗಿದೆ. ಮರವೊಂದಕ್ಕೆ ಸರಾಸರಿ 105 (ಸಾಮರ್ಥ್ಯ ಇಳುವರಿ 148) ಕಾಯಿಗಳ ಇಳುವರಿಯನ್ನು ನೀಡುತ್ತದೆ. ಕಾಯಿಗಳು ತುಂಬಾ ದಪ್ಪನಾಗಿದ್ದು, ಪ್ರತಿ ಕಾಯಿಯಲ್ಲಿ ಕೊಬ್ಬರಿ ಪ್ರಮಾಣ ಹೆಚ್ಚಿರುತ್ತದೆ.

**ಗಿಡ್ಡತಳಿಗಳು:**

1. **ಚೌಘಾಟ್ ಆರೆಂಜ್ ಡ್ವಾರ್ಫ್:** ಇದು ಎಳನೀರಿಗೆ ಸೂಕ್ತವಾದ ಕಿತ್ತಲೆ ಬಣ್ಣದ ಕಾಯಿಗಳನ್ನು ಬಿಡುವ ತಳಿ. ಪ್ರತಿ ಮರಕ್ಕೆ ವರ್ಷಕ್ಕೆ 63 (ಎಕರೆಗೆ 5140) ಕಾಯಿಗಳನ್ನು ಬಿಡುತ್ತದೆ.
2. **ಕಲ್ಪಜ್ಯೋತಿ:** ಇದೂ ಸಹ ಎಳನೀರಿಗೆ ಸೂಕ್ತವಾದ ತಳಿ. ಕಾಯಿಗಳು ಹಳದಿ ಬಣ್ಣವಿರುತ್ತದೆ. ಪ್ರತಿ ಮರಕ್ಕೆ ಸರಾಸರಿ 114 (ಎಕರೆಗೆ 8070) ಕಾಯಿಗಳನ್ನು ಬಿಡುತ್ತದೆ.
3. **ಕಲ್ಪಸೂರ್ಯ:** ಇದೂ ಸಹ ಎಳನೀರಿಗೆ ಸೂಕ್ತವಾದ ತಳಿ. ಕಾಯಿಗಳ ಬಣ್ಣ ಕಿತ್ತಳೆ. ಪ್ರತಿ ಮರಕ್ಕೆ ಸರಾಸರಿ 123 (ಎಕರೆಗೆ 8637) ಕಾಯಿಗಳನ್ನು ಬಿಡುತ್ತದೆ.

**ಸಂಕರಣ ತಳಿಗಳು**

1. **ಚಂದ್ರ ಸಂಕರ:** ಅರೆ ಎತ್ತರದ ತಳಿಯಾಗಿದ್ದು ತಿರುಳು ದುಂಡಾಕಾರವಾಗಿರುತ್ತದೆ. ಕಾಯಿಗಳ ಬಣ್ಣ ಕಂದು. ಪ್ರತಿ ಮರವು ಸರಾಸರಿ 110 ರಿಂದ 123 ಕಾಯಿಗಳನ್ನು ನೀಡುತ್ತದೆ. ಪ್ರತಿ ಎಕರೆಗೆ 1.76 ಟನ್ ಕೊಬ್ಬರಿ ಹಾಗೂ 1.19 ಟನ್ ಎಣ್ಣೆಯನ್ನು ಪಡೆಯಬಹುದು.
2. **ಕೇರಸಂಕರ:** ಪ್ರತಿ ಮರದ ಸರಾಸರಿ ಇಳುವರಿ 108 ಕಾಯಿಗಳು. ಕೊಬ್ಬರಿ ಇಳುವರಿ 20.2 ಕಿ.ಗ್ರಾಂ. ಕೊಬ್ಬರಿಯಲ್ಲಿ ಶೇ. 68 ರಷ್ಟು ಎಣ್ಣೆಯಂಶವಿರುತ್ತದೆ.
3. **ಚಂದ್ರ ಲಕ್ಷ:** ಮರವೊಂದಕ್ಕೆ ಸರಾಸರಿ ಇಳುವರಿ 109 ಕಾಯಿಗಳು. ಕೊಬ್ಬರಿ ಇಳುವರಿ 21.3 ಕಿ.ಗ್ರಾಂ. ಕೊಬ್ಬರಿಯಲ್ಲಿ ಶೇ. 69 ರಷ್ಟು ಎಣ್ಣೆಯಂಶ ಇರುತ್ತದೆ.
4. **ವಸಿಷ್ಠಗಂಗಾ:** ಕಾಯಿಗಳ ಇಳುವರಿ ಪ್ರತಿ ಎಕರೆಗೆ 8957. ಎಕರೆಗೆ 1.57 ಟನ್ ಕೊಬ್ಬರಿ ಇಳುವರಿ ದೊರೆಯುತ್ತದೆ.
5. **ಅನಂತಗಂಗಾ:** ಪ್ರತಿ ಎಕರೆಗೆ 9172 ಕಾಯಿಗಳು ಮತ್ತು ಎಕರೆಗೆ 1.55 ಟನ್ ಕೊಬ್ಬರಿ ಇಳುವರಿಯನ್ನು ಪಡೆಯಬಹುದು.
6. **ಕೇರಸೌಭಾಗ್ಯ:** ಈ ತಳಿಯು ನಾಟಿ ಮಾಡಿದ 5 ವರ್ಷಗಳ ನಂತರ ಫಲ ಕೊಡಲು ಪ್ರಾರಂಭಿಸುತ್ತದೆ. ಒಂದು ವರ್ಷಕ್ಕೆ ಸರಾಸರಿ 116 ಕಾಯಿಗಳು ಪ್ರತಿ ಮರದಿಂದ ದೊರೆಯುತ್ತವೆ. ಪ್ರತಿ ಕಾಯಿಗೆ ಕೊಬ್ಬರಿಯ ಅಂಶವು 196 ಗ್ರಾಂ ಮತ್ತು ಶೇ. 65 ರಷ್ಟು ಎಣ್ಣೆಯಂಶ ಇರುತ್ತದೆ.

**ಬೇಸಾಯ ಸಾಮಗ್ರಿಗಳು:**

| ಅಂತರ | ಕೊಟ್ಟಿಗೆ ಗೊಬ್ಬರ | ಗಿಡದ ವಯಸ್ಸು | ರಾಸಾಯನಿಕ ಗೊಬ್ಬರಗಳು (ಗ್ರಾಂ./ಗಿಡಕ್ಕೆ ಅಥವಾ ಮರಕ್ಕೆ) | | | | | |
|---|---|---|---|---|---|---|---|---|
| | | | ಮುಂಗಾರು (ಮೇ–ಜೂನ್) | | | (ನಾಟಿ ಮಾಡಿದ ಮೇಲೆ)ಹಿಂಗಾರು (ಸೆಪ್ಟೆಂಬರ್–ಅಕ್ಟೋಬರ್) | | |
| | | | ಸಾರಜನಕ | ರಂಜಕ | ಪೊಟ್ಯಾಷ್ | ಸಾರಜನಕ | ರಂಜಕ | ಪೊಟ್ಯಾಷ್ |
| ಎತ್ತರದ ತಳಿಗಳು: 27 x27 ಅಡಿಗಳು | ಗಿಡ ನಾಟಿ ಮಾಡುವಾಗ : 20 ಕಿ.ಗ್ರಾಂ. ಪ್ರತಿ ಗಿಡಕ್ಕೆ | ವರ್ಷ 1 | – | – | – | 50 | 40 | 135 |
| | | ವರ್ಷ 2 | 50 | 40 | 135 | 110 | 80 | 270 |
| | | ವರ್ಷ 3 | 110 | 80 | 270 | 220 | 160 | 540 |
| ಗಿಡ್ಡ ಮತ್ತು ಸಂಕರಣ ತಳಿಗಳು: 23x23 ಅಡಿಗಳು | 4 ವರ್ಷಗಳಿಗಿಂತ ಮೇಲ್ಪಟ್ಟ ಗಿಡಗಳಿಗೆ ತಲಾ: 50 ಕಿ.ಗ್ರಾಂ. ಅಥವಾ 30 ಕಿ.ಗ್ರಾಂ ಹಸಿರೆಲೆ ಗೊಬ್ಬರ | ವರ್ಷ 4 ಮತ್ತು ನಂತರ | 170 | 120 | 400 | 330 | 200 | 800 |

ಗರಿ ಹಳದಿಯಾಗಿರುವ ಮರಗಳಿಗೆ ಮರವೊಂದಕ್ಕೆ ವಾರ್ಷಿಕ 500 ಗ್ರಾಂ ಮೆಗ್ನೀಷಿಯಂ ಸಲ್ಫೇಟ್ ಕೊಡುವುದು ಸೂಕ್ತ.

**ಬೇಸಾಯ ಕ್ರಮಗಳು:** ಉತ್ತಮ ಗುಣಮಟ್ಟದ ಸಸಿಗಳನ್ನು ಬೆಳೆಸಲು ಕೆಳಗಿನ ವಿಧಾನಗಳನ್ನು ಅನುಸರಿಸಬೇಕು.

**ಬಿತ್ತನೆ ಕಾಯಿಗಳ ಆಯ್ಕೆ**

- ಮಳೆಯಾಶ್ರಯದಲ್ಲಿ ಪ್ರತಿ ವರ್ಷವೂ 80–100 ಕಾಯಿಗಳನ್ನು ಬಿಡುತ್ತಿರುವ 20–40 ವರ್ಷ ವಯಸ್ಸಿನ, ಆರೋಗ್ಯಕರ ಮರಗಳಿಂದ, ಗೋಲಾಕಾರದ, ಮಧ್ಯಮ ಗಾತ್ರದ ಕಾಯಿಗಳನ್ನು ಬಿತ್ತನೆಗಾಗಿ ಆರಿಸಬೇಕು.
- ಕಡಿಮೆ ನೀರುಳ್ಳ, ಸಂಪೂರ್ಣ ಬಲಿತ, ಮಧ್ಯಮ ಗಾತ್ರದ ಕಾಯಿಗಳನ್ನು ಆರಿಸಬೇಕು.
- ಪ್ರತಿ ತಾಯಿ ಮರವು 12 ಗೊಂಚಲು ಮತ್ತು 30–40 ಗರಿಗಳನ್ನು ಹೊಂದಿರಬೇಕು.
- ಆಕ್ಟೋಬರ್‌ನಿಂದ ಮಾರ್ಚ್ ತಿಂಗಳವರೆಗೆ ಬರುವ ಕಾಯಿಗಳನ್ನು ಬಿತ್ತನೆಗೆ ಉಪಯೋಗಿಸಬೇಕು.
- ಆಯ್ದ ಕಾಯಿಗಳನ್ನು 2 ತಿಂಗಳ ಕಾಲ ತೊಟ್ಟು ಮೇಲ್ಮುಖನಾಗಿರುವಂತೆ ನೆರಳಿನಲ್ಲಿ ಶೇಖರಿಸಿಡಬೇಕು.

**ಸಸಿಮಡಿ ತಯಾರಿಕೆ ಮತ್ತು ಕಾಯಿ ನೆಡುವಿಕೆ**

- 22 ಅಡಿ ಉದ್ದ x 4.5 ಅಡಿ ಅಗಲದ ಅಳತೆಯ ಸಸಿಮಡಿಗಳನ್ನು ತಯಾರಿಸಿ. 40 ಸೆಂ.ಮೀ. ಅಂತರದ ಸಾಲುಗಳಲ್ಲಿ, 1.5 ಅಡಿ ಆಳದ ಕಾಲುವೆ ತೆಗೆದು ಮರಳನ್ನು ತುಂಬಬೇಕು.
- ಎರಡು ತಿಂಗಳು ಸಂಗ್ರಹಿಸಿಟ್ಟ ಬಿತ್ತನೆ ಕಾಯಿಗಳನ್ನು ಒಂದು ಅಡಿ ಅಂತರದಲ್ಲಿ ನೆಟ್ಟಗೆ ಸಸಿಮಡಿಯಲ್ಲಿ ನಾಟಿಮಾಡಬೇಕು. ಕಾಯಿಗಳ ಮೇಲೆ 2 ಅಂಗುಲಕ್ಕಿಂತ ಹೆಚ್ಚು ಮರಳು ಇರಬಾರದು. ಕಾಯಿಗಳನ್ನು ಅಡ್ಡಲಾಗಿಯೂ ಸಹ ನೆಡಬಹುದು.

- ನಾಟಿ ಮಾಡಿದ ಬಿತ್ತನೆ ಕಾಯಿಗಳು 3 ರಿಂದ 4 ತಿಂಗಳುಗಳಲ್ಲಿ ಮೊಳಕೆಯೊಡೆದು, ಸುಮಾರು 12 ರಿಂದ 18 ತಿಂಗಳಲ್ಲಿ ನಾಟಿಗೆ ಸಿದ್ಧಗೊಳ್ಳುತ್ತವೆ. ತಡವಾಗಿ ಅಂದರೆ 5 ತಿಂಗಳುಗಳ ನಂತರ ಮೊಳಕೆ ಬಂದ ಸಸಿಗಳನ್ನು ನಾಟಿಗೆ ಉಪಯೋಗಿಸಬಾರದು.
- ಹೆಚ್ಚು ಗರಿಗಳುಳ್ಳ (5 ರಿಂದ 6), ದಪ್ಪಕಾಂಡ ಹೊಂದಿದ (4 ಅಂಗುಲ ಗಾತ್ರ), ದೃಢವಾಗಿರುವ, ತ್ವರಿತ ಬೆಳವಣಿಗೆ ಹೊಂದಿರುವ, ಹೆಚ್ಚು ಬೇರು ಹೊಂದಿರುವ ಹಾಗೂ ಗರಿಗಳು ಸೀಳಿರುವ ಸಸಿಗಳನ್ನು ನಾಟಿ ಮಾಡಲು ಉಪಯೋಗಿಸಬೇಕು.

**ಸಸಿ ನಾಟಿಮಾಡುವುದು:** ಚೆನ್ನಾಗಿ ಉಳುಮೆಮಾಡಿ ಭೂಮಿಯನ್ನು ತಯಾರಿಸಬೇಕು. ತಳಿಗೆ ಅನುಗುಣವಾಗಿ ಶಿಫಾರಸ್ಸು ಮಾಡಿದ ಅಂತರದಲ್ಲಿ 3 ಘನ ಅಡಿ ಅಳತೆಯ ಗುಣಿಗಳನ್ನು ತೆಗೆಯಬೇಕು. ಗುಣಿಗಳನ್ನು ಹಸಿರೆಲೆ, ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣಿನಿಂದ 2 ಘನ ಅಡಿ ವರೆಗೆ ತುಂಬಬೇಕು. ಮಣ್ಣಿನ ಗುಣಧರ್ಮಕ್ಕನುಗುಣವಾಗಿ 1.5 ಅಡಿ ಆಳದಲ್ಲಿ ಸಸಿಗಳನ್ನು ನಾಟಿ ಮಾಡಿ ಕೋಲಿನಿಂದ ಆಧಾರವನ್ನು ಕೊಡಬೇಕು. ಬೇಸಿಗೆಯಲ್ಲಿ ಸ್ವಲ್ಪ ಪ್ರಮಾಣದ ನೆರಳನ್ನು ಒದಗಿಸಬೇಕು. ಗೆದ್ದಲಿನ ಹತೋಟಿಗೆ *ಪ್ರತಿ* ಗುಣಿಗೆ 10 ಗ್ರಾಂ ಫೋರೇಟ್ ಹರಳುಗಳನ್ನು ನಾಟಿ ಸಮಯದಲ್ಲಿ ಹಾಕಬೇಕು.

**ನೀರಾವರಿ ಮತ್ತು ಅಂತರ ಬೇಸಾಯ:** ತೆಂಗಿನ ವಿವಿಧ ಬೆಳವಣಿಗೆಯ ಹಂತಗಳಲ್ಲಿ ನೀರಿನ ನಿರ್ವಹಣೆಯನ್ನು ಈ ಕೆಳಗೆ ಸೂಚಿಸಲಾಗಿದೆ.

- **ಮೊದಲನೆ ನಾಲ್ಕು ವರ್ಷ ವಯಸ್ಸಿನ ಗಿಡಗಳಿಗೆ :** ಪ್ರಾರಂಭಿಕ ಹಂತದಲ್ಲಿ ಪ್ರತಿ 2 ರಿಂದ 3 ದಿನಕ್ಕೊಮ್ಮೆ 25 ರಿಂದ 30 ಲೀ. ನೀರನ್ನು ಕೊಡಬೇಕು. ಗಿಡಗಳು ಬೆಳೆದಂತೆ ಪ್ರತಿ 4 ದಿನಗಳಿಗೊಮ್ಮೆ 75 ರಿಂದ 80 ಲೀ. ನೀರನ್ನು ಒದಗಿಸಬೇಕು.
- **ನಾಲ್ಕು ವರ್ಷಗಳಿಗಿಂತ ಮೇಲ್ಪಟ್ಟ ಸಸಿಗಳಿಗೆ :** 5.5’ ರಿಂದ 6’ ಅಡಿ ವೃತ್ತಾಕಾರದಲ್ಲಿ ಪಾತಿಗಳನ್ನು ಮಾಡಿ ಪ್ರತಿ ನಾಲ್ಕು ದಿನಗಳಿಗೊಮ್ಮೆ 200 ರಿಂದ 250 ಲೀ. ನೀರನ್ನು ಕೊಡಬೇಕು.

**ಅಂತರ ಮತ್ತು ಮಿಶ್ರ ಬೆಳೆಗಳು:** ತೆಂಗು ಬಹುವಾರ್ಷಿಕ ಮತ್ತು ಹೆಚ್ಚಿನ ಅಂತರದಲ್ಲಿ ನಾಟಿ ಮಾಡುವ ಬೆಳೆಯಾಗಿರುವುದರಿಂದ ಹೆಚ್ಚಿನ ಪ್ರಮಾಣದ ಭೂ ಪ್ರದೇಶ ಸಮರ್ಪಕವಾಗಿ ಬಳಕೆಯಾಗುವುದಿಲ್ಲ. ಅದ್ದರಿಂದ ಅಂತರ ಮತ್ತು ಮಿಶ್ರ ಬೆಳೆ ಪದ್ಧತಿಗಳಿಗೆ ತೆಂಗಿನ ಬೆಳೆಯಲ್ಲಿ ವಿಪುಲ ಅವಕಾಶಗಳಿವೆ. ತೆಂಗಿನ ವಿವಿಧ ಬೆಳವಣಿಗೆಯ ಹಂತಗಳಿಗೆ ಅನುಸಾರವಾಗಿ ಹಲವಾರು ಬೆಳೆಗಳನ್ನು ಅಳವಡಿಸಿಕೊಳ್ಳಬಹುದು.

- ಎಂಟು ವರ್ಷಗಳವರೆಗಿನ ತೆಂಗಿನ ಬೆಳೆಯಲ್ಲಿ ಆಯಾ ಪ್ರದೇಶಕ್ಕನುಗುಣವಾಗಿ ದ್ವಿದಳ ಧಾನ್ಯಗಳು, ತರಕಾರಿ ಬೆಳೆಗಳು, ಹಣ್ಣಿನ ಬೆಳೆಗಳಾದ ಪಪ್ಪಾಯ, ಪೈನಾಪಲ್, ಬಾಳೆ ಹಾಗೂ ಅರಿಶಿನ, ಶುಂಠಿ ಬೆಳೆಗಳನ್ನು ಬೆಳೆಯಬಹುದು.
- ಎಂಟರಿಂದ ಇಪ್ಪತ್ತೈದು ವರ್ಷ ವಯಸ್ಸಿನ ತೆಂಗಿನ ತೋಟದಲ್ಲಿ ತೆಂಗಿನ ಮರಗಳ ತೆಂಡೆ ಭಾಗ ಹೆಚ್ಚು ವಿಸ್ತಾರವಾಗಿರುತ್ತದೆ. ಅದ್ದರಿಂದ ಸೂರ್ಯನ ಕಿರಣಗಳು ವಿರಳವಾಗಿ ಭೂಮಿಯನ್ನು ತಲುಪುವುದರಿಂದ ಈ ಅವಧಿಯಲ್ಲಿ ನೆರಳನ್ನು ಬಯಸುವ ಬೆಳೆಗಳನ್ನು ಅಂತರ ಬೆಳೆಗಳನ್ನಾಗಿ ಬೆಳೆಯಬಹುದು.

- ನಾಟಿ ಮಾಡಿದ 25 ವರ್ಷಗಳ ನಂತರ ನಿಂಬೆ, ಕೋಕೋ, ಕರಿಮೆಣಸು, ದಾಲ್ಚಿನ್ನಿ, ಜಾಯಿಕಾಯಿ, ಲವಂಗ, ಸರ್ವಸಾಂಬಾರ, ವೆನಿಲ್ಲಾ, ನುಗ್ಗೆ, ಕರಿಬೇವು, ಪಚೋಲಿ, ನೆಲಬೇವು, ತುಳಸಿ, ನಿಂಬೆಹುಲ್ಲು, ಹಿಪ್ಪಲಿ ಮತ್ತು ಕಾಫಿ ಬೆಳೆಗಳನ್ನು ಮಿಶ್ರ ಬೆಳೆಗಳನ್ನಾಗಿ ಬೆಳೆಯಬಹುದು.
- **ಮಿಶ್ರ ಬೇಸಾಯ:** ಹುಲ್ಲಿನ ಬೆಳೆಗಳಾದ ಎನ್‌ಬಿ–21, ಸಿಒ–3, ಸಿಒ–4, ಗಿನಿ ಹುಲ್ಲನ್ನು ಬೆಳೆದು ಹಸುಗಳನ್ನು ಸಾಕಬಹುದು.

**ವಿಶೇಷ ಸೂಚನೆ**

- ತೆಂಗಿನ ಮರದಿಂದ 6 ಅಡಿ ಸುತ್ತಳತೆಯಲ್ಲಿ ಯಾವುದೇ ಅಂತರ ಅಥವಾ ಆಳವಾಗಿ ಬೇರು ಬಿಡುವ ಮಿಶ್ರ ಬೆಳೆಗಳನ್ನು ಬೆಳೆಯಬಾರದು.
- ಪ್ರಧಾನ ಬೆಳೆಯಾಗಿ ತೆಂಗಿನೊಂದಿಗೆ ಅಂತರ ಮತ್ತು ಮಿಶ್ರ ಬೆಳೆಗಳಿಗಿರುವ ಸುಧಾರಿತ ಬೇಸಾಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು.
- ತೆಂಗಿನ ಮಧ್ಯ ಮಿಶ್ರ ಬೆಳೆಯಾಗಿ ಸಪೋಟ, ಮಾವು, ಹುಣಿಸೆ, ಗೋಡಂಬಿ ಮುಂತಾದ ಬಹುವಾರ್ಷಿಕ ಬೆಳೆಗಳನ್ನು ಕೃಷಿ ಮಾಡುವುದು ಸೂಕ್ತವಲ್ಲ.

**ಶಾರೀರಿಕ ನ್ಯೂನ್ಯತೆಗಳು: 1. ಕ್ರೌನ್ ಚೋಕ್ :** ಬೋರಾನ್ ಕೊರತೆಯಿಂದ ಈ ನ್ಯೂನತೆ ಉಂಟಾಗುತ್ತದೆ.ವಿರೂಪಗೊಂಡ ಮತ್ತು ಸುಕ್ಕುಗಟ್ಟಿದ ಕಡಿಮೆ ತೆಂಗಿನ ಗರಿಗಳ ಹೊರಹೊಮ್ಮುವಿಕೆ ಮೊದಲ ಲಕ್ಷಣವಾಗಿದೆ. ಈ ಗರಿಗಳು ತೀವ್ರವಾದ ತುದಿ ಕೊಳೆಯುವಿಕೆಗೆ (ನೆಕ್ರೋಸಿಸ್) ತುತ್ತಾಗುತ್ತವೆ. ಮತ್ತು ಪೂರ್ಣವಾಗಿ ತೆರೆದುಕೊಳ್ಳುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಎಲೆಗಳ ತುದಿ ಕೊಕ್ಕೆಯಾಗುತ್ತದೆ. ಅರ್ಧವಾರ್ಷಿಕ ಮಧ್ಯಂತರದಲ್ಲಿ ಬೋರಾಕ್ಸ್ 50 ಗ್ರಾಂ. ನ್ನು ಒಂದು ಮರಕ್ಕೆ ಹಾಕಬೇಕು.

**2. ಪೆನ್ಸಿಲ್ ತುದಿ ನ್ಯೂನತೆ:** ಈ ನ್ಯೂನತೆಯಿಂದಾಗಿ ತೆಂಗಿನ ಮರದ ಕಾಂಡವು ಪೆನ್ಸಿಲ್ ತುದಿಯಂತೆ ಚೂಪಾಗುತ್ತಾ ಕಡಿಮೆ ಎಲೆಗಳನ್ನು ಉತ್ಪತ್ತಿ ಮಾಡುತ್ತದೆ. ಎಲೆಗಳ ಗಾತ್ರವು ಕೂಡ ಕಿರಿದಾಗುತ್ತದೆ. ಇದು ಪೋಷಕಾಂಶಗಳ ಕೊರತೆಗೆ ಸಂಬಂಧಿಸಿದೆ. ಪ್ರತಿ ವರ್ಷ ಒಂದು ಮರಕ್ಕೆ 500 ಗ್ರಾಂ. ಸಾರಜನಕ, 300 ಗ್ರಾಂ ರಂಜಕ, 1000 ಗ್ರಾಂ ಪೊಟ್ಯಾಷ್ ಜೊತೆಗೆ 500 ಗ್ರಾಂ. ಮೆಗ್ನೀಷಿಯಂ ಸಲ್ಫೇಟ್ ಮತ್ತು 200 ಗ್ರಾಂ. ಬೋರಾಕ್ಸ್, 200 ಗ್ರಾಂ ಸತುವಿನ ಸಲ್ಫೇಟ್ ಹಾಗೂ 25 ಕೆ.ಜಿ. ಕೊಟ್ಟಿಗೆ ಗೊಬ್ಬರವನ್ನು ಹಾಕುವುದರಿಂದ ಈ ನ್ಯೂನತೆಯನ್ನು ನಿವಾರಿಸಬಹುದು.

**3. ಹರಳು ಮತ್ತು ಹೀಚು ಉದುರುವುದು (ಬಟನ್ ಶೆಡ್ಡಿಂಗ್):** ಕಡಿಮೆ ಮತ್ತು ಹೆಚ್ಚಿನ ತೇವಾಂಶದ ಅಸಮತೋಲನೆ, ಪೋಷಕಾಂಶಗಳ ಕೊರತೆ ಮತ್ತು ಕೀಟ–ರೋಗಗಳ ಬಾದೆ,ವಿರಳ ಪರಾಗಸ್ಪರ್ಶ ಹಾಗೂ ಪ್ರತಿಕೂಲ ಮಣ್ಣಿನ ಪರಿಸ್ಥಿತಿಗಳಿಂದ ಈ ನ್ಯೂನತೆ ಉಂಟಾಗುತ್ತದೆ. ತೇವಾಂಶ ಮತ್ತು ಪೋಷಕಾಂಶಗಳ ಸಮತೋಲನೆ, ಕೀಟ ರೋಗಗಳ ಉತ್ತಮ ನಿರ್ವಹಣೆ ಹಾಗೂ ಬೋರಾಕ್ಸ್ (50 ಗ್ರಾಂ.) ಮತ್ತು ಪೊಟ್ಯಾಷ್ (1000 ಗ್ರಾಂ) ಪೋಷಕಾಂಶಗಳ ಬಳಕೆಯಿಂದ ಈ ನ್ಯೂನತೆಯನ್ನು ನಿಯಂತ್ರಿಸಬಹುದು.

**4. ಗೊನೆ ಇಳಿ (ಜೋತು) ಬೀಳುವಿಕೆ:** ಈ ನ್ಯೂನತೆಯು ತೆಂಗಿನ ಗರಿಗಳ ತೊಟ್ಟುಗಳ ಭಾಗದಲ್ಲಿ ತೆಂಗಿನಕಾಯಿ ಗೊನೆಗಳು ಸರಿಯಾಗಿ ಕೂರದೇ ಇರುವುದನ್ನು ಸೂಚಿಸುತ್ತದೆ. ಗೊನೆಗಳು ಎಲೆಗಳ ನಡುವೆ ತೂಗಾಡುತ್ತಲೇ ಇರುತ್ತವೆ. ಕಾಯಿಗಳ ಬೆಳವಣಿಗೆಯ ತೂಕದಿಂದಾಗಿ ಗೊನೆಗಳ ತೊಟ್ಟುಗಳ ಭಾಗದಲ್ಲಿ ಮುರಿಯುತ್ತದೆ. ಅನುವಂಶಿಕ ಅಸ್ವಸ್ಥತೆಗಳು, ತೇವಾಂಶದ ಕೊರತೆ, ಪೋಷಕಾಂಶಗಳ ನಿರ್ವಹಣೆ ಮತ್ತು ಗ್ಯಾನೊಡರ್ಮಾ ರೋಗದ ಸಂಭವಗಳು ಇದಕ್ಕೆ ಕಾರಣ. ,ಉತ್ತಮ ತಾಯಿ ಮರದ ಆಯ್ಕೆ ಗ್ಯಾನೊಡರ್ಮಾ ರೋಗದ ನಿರ್ವಹಣೆ, ತೇವಾಂಶ ಮತ್ತು ಪೋಷಕಾಂಶಗಳ ಸಮತೋಲನೆ.

**ಕೊಯ್ಲು ಮತ್ತು ಇಳುವರಿ:** ತಳಿಗೆ ಅನುಗುಣವಾಗಿ ನಾಟಿ ಮಾಡಿದ 4 ರಿಂದ 7 ವರ್ಷಗಳಿಗೆ ಗಿಡಗಳು ಕಾಯಿ ಬಿಡಲು ಪ್ರಾರಂಭಿಸುತ್ತವೆ. ಗಿಡ್ಡತಳಿಗಳು 3 ರಿಂದ 4 ವರ್ಷಕ್ಕೆ ಫಲಕ್ಕೆ ಕೊಡುತ್ತವೆ. ಪ್ರತಿ ಮರದಿಂದಲೂ ವರ್ಷಕ್ಕೆ ಸರಾಸರಿ ಕಾಯಿಗಳ ಇಳುವರಿ ಈ ಕೆಳಗಿನಂತಿರುತ್ತದೆ.

- ಎತ್ತರ ತಳಿಗಳು – 80 ರಿಂದ 100 ಕಾಯಿಗಳು
- ಗಿಡ್ಡ ತಳಿಗಳು – 80 ರಿಂದ 95 ಕಾಯಿಗಳು
- ಸಂಕರಣ ತಳಿಗಳು – 100 ರಿಂದ 150 ಕಾಯಿಗಳು

| ಸಸ್ಯ ಸಂರಕ್ಷಣಾ ಕ್ರಮಗಳು | | |
|---|---|---|
| **ಮುಖ್ಯ ಕೀಟ/ಪೀಡೆಗಳು** | **ಹಾನಿಯ ಚಿಹ್ನೆಗಳು** | **ಹತೋಟಿ ಕ್ರಮಗಳು** |
| **ಗೆದ್ದಲು** | ಕೆಲಸಗಾರ್ತಿ ಗೆದ್ದಲು ಹುಳುಗಳು ಸಸಿ ಮಡಿಯಲ್ಲಿ ಬೇರು ಮತ್ತು ಬಿತ್ತನೆ ಕಾಯಿಗಳನ್ನು ತಿಂದು ನಾಶಪಡಿಸುತ್ತವೆ. ಅಂತಹ ಸಸಿಗಳು ಒಣಗುತ್ತವೆ. ಒಣಗಿದ ಸಸಿಗಳನ್ನು ಕೈಯಿಂದ ಎಳೆದರೆ ಸುಲಭವಾಗಿ ಕಿತ್ತು ಬರುತ್ತವೆ. ಕೃಷಿ ಭೂಮಿಯಲ್ಲಿ ತೆಂಗಿನ ಕಾಂಡದ ಮೇಲೆ ಮಣ್ಣಿನ ಪದರಮಾಡಿ ಕಾಂಡವನ್ನು ಕೆರೆದು ತಿನ್ನುತ್ತವೆ. ಕಾಂಡದ ಮೇಲಿನ ಹಾವಳಿ ಅಷ್ಟಾಗಿ ಹಾನಿಕಾರಕವಲ್ಲ. | ಸಸಿಮಡಿಯಲ್ಲಿ ಮಣ್ಣಿನ ತೇವಾಂಶ ಕಾಪಾಡಿಕೊಳ್ಳುವುದು, ತೀವ್ರತೆ ಹೆಚ್ಚಾದಾಗ ಪ್ರತೀ ಲೀಟರ್ ನೀರಿಗೆ 10ಮಿ.ಲೀ. ಕ್ಲೋರೋಫೈರಿಫಾಸ್ 20 ಇ.ಸಿಯನ್ನು ಸೇರಿಸಿ ಸಸಿಗಳ ಬುಡಕ್ಕೆ ಹಾಕುವುದು. ನಾಟಿ ಮಾಡಿದ ಗಿಡಗಳಲ್ಲಿ ಬಾಧೆ ಕಂಡು ಬಂದಲ್ಲಿ ಪ್ರತಿ ಗಿಡಕ್ಕೆ 8 ರಿಂದ 10 ಲೀ. ದ್ರಾವಣವನ್ನು ಬುಡಭಾಗಕ್ಕೆ ಸುರಿಯುವುದು. ಕಾಂಡದ ಮೇಲೆ ಮಣ್ಣಿನ ಪದರವನ್ನು ತೆಗೆದು ಇದೇ ದ್ರಾವಣವನ್ನು ಸುರಿಯುವುದು. |
| **ಸುಳಿಕೊರೆಯುವ ರೈನೋಸೆರಸ್ ದುಂಬಿ** | ಪ್ರೌಢ ದುಂಬಿಗಳು ಸುಳಿಯ ಭಾಗವನ್ನು ಕೊರೆದು ತಿನ್ನುತ್ತವೆ. ಅಂತಹ ಸುಳಿಗಳು ಹೊರ ಹೊಮ್ಮಿದಾಗ ಗರಿಗಳು ಸಮಾನತೆಯಲ್ಲಿ ಕತ್ತರಿಸಿದಂತೆ ಕಾಣುವುದು. ಕೊರೆದ ಭಾಗದಲ್ಲಿ ಜುಂಗು ಹೊರ ಬರುತ್ತಿರುತ್ತದೆ. | ತೋಟದಲ್ಲಿ /ಪಕ್ಕದಲ್ಲಿ ತಿಪ್ಪೆ ಗುಂಡಿಗಳಿದ್ದರೆ ಪ್ರತಿ ಮೂರು ಘನ ಮೀಟರ್‌ಗೆ 350 ಗ್ರಾಂ. ಕ್ವಿನಾಲ್‌ಪಾಸ್ 1.5 ಡಿ ಕೀಟನಾಶಕವನ್ನು ಮಿಶ್ರ ಮಾಡುವುದು.<br>ಕಬ್ಬಿಣದ ತಂತಿಯ ಕೊಕ್ಕೆಯ ಸಹಾಯದಿಂದ ಕೊರೆದ ಭಾಗದಲ್ಲಿ ಚುಚ್ಚಿ ದುಂಬಿಯನ್ನು ಹೊರ ತೆಗೆಯುವುದು. ರಂಧ್ರವನ್ನು ಕ್ವಿನಾಲ್‌ಫಾಸ್ ಶೇ. 2/ಡಿ ಅಥವಾ ಮೆಲಾಥಿಯಾನ್ ಶೇ. 5ಡಿ ಯನ್ನು ಮತ್ತು ಮರಳನ್ನು ಸಮ ಪ್ರಮಾಣದಲ್ಲಿ ಮಿಶ್ರ ಮಾಡಿ ರಂಧ್ರಕ್ಕೆ ತುಂಬಬೇಕು. |
| **ಗರಿ ತಿನ್ನುವ ಕಪ್ಪು ತಲೆ ಕಂಬಳಿ ಹುಳು** | ಮರಿ ಹುಳುಗಳು ಗರಿಗಳ ತಳಭಾಗದಲ್ಲಿದ್ದು ಗರಿಗಳನ್ನು ಕೆರೆದು ತಿನ್ನುತ್ತವೆ. ಮರಿ | ಬಾಧೆಗೆ ತುತ್ತಾದ ಗರಿಗಳನ್ನು ತೆಗೆದು ಸುಡುವುದು. ನಂತರ 2 ಮಿ.ಲೀ ಮ್ಯಾಲಾಥಿಯಾನ್ 50 ಇ.ಸಿ. |

| | | |
|---|---|---|
| | ಹುಳುಗಳು ರೇಷ್ಮೆಯಂತೆ ಜಾಡಿನ ಬಲೆಯಲ್ಲಿರುತ್ತವೆ. ರೇಷ್ಮೆ ಜಾಡಿನಲ್ಲಿ ಮರಿ ಹುಳುಗಳ ಹಿಕ್ಕೆಗಳು ಇದ್ದು ಬಾದೆಗೊಳಗಾದ ಗರಿಗಳು/ತೋಟಗಳು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ. | ಕೀಟನಾಶಕವನ್ನು ಒಂದು ಲೀಟರ್ ನೀರಿಗೆ ಸೇರಿಸಿ. ಗರಿಗಳ ತಳಭಾಗಕ್ಕೆ ಸಿಂಪರಿಸುವುದು. ಪೀಡೆಯ ಬಾಧೆ ಅಧಿಕವಾದಲ್ಲಿ ಸಾಮೂಹಿಕವಾಗಿ ಮಾನೋಕ್ರೋಟೋಫಾಸ್ 36 ಎಸ್.ಎಲ್ ಕೀಟನಾಶಕವನ್ನು ಬೇರಿನ ಮೂಲಕ ಗಿಡಗಳಿಗೆ ಉಣಿಸಬೇಕು.<br>**ವಿಧಾನ :** ಮರದಿಂದ ಒಂದು ಮೀಟರ್ ದೂರದಲ್ಲಿ ಒಂದು ಬಲಿತ ಪೆನ್ಸಿಲ್ ಗಾತ್ರದ ಕಂದು ಬಣ್ಣದ ಬೇರನ್ನು ಅಗೆದು ತೆಗೆದು ಅದರ ತುದಿಯನ್ನು ಓರೆಯಾಗಿ ಕತ್ತರಿಸಿ, 4 ಸೆಂ.ಮೀ. ಅಗಲ 15 ಸೆಂ.ಮೀ ಉದ್ದದ ಪ್ಲಾಸ್ಟಿಕ್ ಚೀಲದಲ್ಲಿ 7.5 ರಿಂದ 10 ಮಿ.ಲೀ ಮಾನೋಕ್ರೋಟೋಫಾಸ್ 36 ಎಸ್.ಎಲ್ ಗೆ ಅಷ್ಟೇ ಪ್ರಮಾಣದ ನೀರನ್ನು ಸೇರಿಸಿ ತಯಾರಿಸಿದ ದ್ರಾವಣದಲ್ಲಿ ಕತ್ತರಿಸಿದ ಬೇರಿನ ಭಾಗವನ್ನು ಮುಳುಗುವಂತೆ ಊರಿ ಪ್ಲಾಸ್ಟಿಕ್ ಚೀಲದ ಬಾಯಿಯನ್ನು ದಾರದಿಂದ ಕಟ್ಟಬೇಕು. ಈ ರೀತಿಯಲ್ಲಿ ಮಾಡಿದ 24 ಗಂಟೆಗಳಲ್ಲಿ ಬೇರಿನ ಮೂಲಕ ಕೀಟನಾಶಕವನ್ನು ಮರ ಹೀರಿಕೊಳ್ಳುತ್ತದೆ. ಹೀರಿಕೊಳ್ಳದಿದ್ದರೆ 48 ಗಂಟೆಗಳ ನಂತರ ಬೇರೆ ಬೇರಿನಿಂದ ಕೀಟನಾಶಕವನ್ನು ಉಣಿಸ ಬೇಕಾಗುತ್ತದೆ. ಹೀಗೆ ಉಪಚರಿಸಿದ 30 ದಿನಗಳವರೆಗೂ ಎಳನೀರು/ಕಾಯಿಗಳನ್ನು ಮರದಿಂದ ಕೀಳಬಾರದು.<br>ಗರಿ ತಿನ್ನುವ ಕಪ್ಪು ತಲೆ ಹುಳುವಿನ ಬಾಧೆ ಪ್ರತಿ ಎರಡು ಗರಿಗಳಿಗೆ ಒಂದರಂತ್ತಿದ್ದರೆ ಪ್ರತಿ ಗಿಡಕ್ಕೆ 10 ರಿಂದ 12 ಗೋನಿಯೋಜಸ್ ಹೆಣ್ಣು ಪರತಂತ್ರ ಜೀವಿಗಳನ್ನು ಬಿಡುಗಡೆ ಮಾಡುವುದು. |
| **ಕೆಂಪು ಮೂತಿಯ ದುಂಬಿ** | ಹೆಣ್ಣು ದುಂಬಿಗಳು ಕಾಂಡದ ಮೇಲಿನ ಹಾನಿಯಾಗಿರುವ ಸ್ಥಳದಲ್ಲಿ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಗಳಿಂದ ಹೊರ ಬಂದ ಮರಿಹುಳುಗಳು ಕಾಂಡವನ್ನು ಕೊರೆದು, ಕಾಂಡದ ಒಳಭಾಗವನ್ನು ತಿನ್ನುತ್ತವೆ. ಅಂತಹ ಜಾಗದಲ್ಲಿ ದ್ರವ ಸೋರುತ್ತಿರುತ್ತದೆ. ಹೆಚ್ಚಿನ ಹಾನಿಯಾದಲ್ಲಿ ಮರ ಗಾಳಿಯ ರಭಸಕ್ಕೆ ಮುರಿಯುವ ಸಾಧ್ಯತೆ ಇರುತ್ತದೆ. | ಕಾಂಡದ ಭಾಗದಲ್ಲಿ ಯಾವುದೇ ತರಹದ ಹಾನಿಯಾಗದಂತೆ ಮುನ್ನಚ್ಚರಿಕೆ ಕ್ರಮಗಳನ್ನು ವಹಿಸಬೇಕು. ರಸ ಸೋರುತ್ತಿರುವ ಕಡೆ ರಂಧ್ರ ಮಾಡಿ ಅದಕ್ಕೆ 4 ಗ್ರಾಂ, ಡೈಕ್ಲೋರ್‌ವಾಸ್ 76 ಇ.ಸಿಯನ್ನು ಒಂದು ಲೀಟರ್ ನೀರಿನಲ್ಲಿ ಸೇರಿಸಿ, ರಂಧ್ರದಲ್ಲಿ ಸೇರಿಸಿ ನಂತರ ರಂಧ್ರವನ್ನು ಹಸಿ ಮಣ್ಣಿನಿಂದ ಮುಚ್ಚುವುದು. ಎಕರೆಗೆ ಒಂದು ಆಕರ್ಷಕ ಬಲೆಯನ್ನು ಬಳಸಿ ದುಂಬಿಗಳನ್ನು ಅಕರ್ಷಿಸುವುದು. (ಹುಳಿ ಬಂದ ಕಬ್ಬಿನರಸ + ಅಸೆಟಿಕ್ ಆಮ್ಲ + ತೆಂಗಿನ ಗರಿಗಳ ದಂಟು + ಈಸ್ಟ್) |
| **ಹಿಟ್ಟು ತಿಗಣೆ** | ಬಿಳಿ ತುಪ್ಪಳಿನ ತಿಗಣೆಗಳು ಹೊಂಬಾಳೆಗಳಿಂದ ರಸ ಹೀರುತ್ತವೆ. | ಬಾಧೆ ಕಂಡು ಬಂದಲ್ಲಿ ಪ್ರತಿ ಲೀಟರ್ ನೀರಿಗೆ 1.7 ಮಿ.ಲೀ ಡೈಮಿಥೊಯೇಟ್ 30 ಇ.ಸಿ ಅಥವಾ 0.5 ಮಿ.ಲೀ ಇಮಿಡಾಕ್ಲೋಪ್ರಿಡ್ 200 ಎಸ್.ಎಲ್ ಬೆರೆಸಿ ಸಿಂಪರಿಸುವುದು. |

| | | |
|---|---|---|
| **ಶಲ್ಕ ಕೀಟ** | ಶಲ್ಕ ಕೀಟಗಳು ಗರಿಗಳ ತಳಭಾಗದಲ್ಲಿ ಗುಂಪಾಗಿದ್ದು ರಸಹೀರುತ್ತಿರುತ್ತವೆ. ಅಂತಹ ಗರಿಗಳ ಮೇಲ್ಭಾಗದಲ್ಲಿ ಹಳದಿ ಮಚ್ಚೆಗಳು ಕಂಡು ಬರುತ್ತವೆ. | ಸದರಿ |
| **ಗೊಣ್ಣೆ ಹುಳು** | ಮರಿ ಹುಳುಗಳು 'ಅ' ಆಕಾರ, ಮಣ್ಣಿನಲ್ಲಿದ್ದು ಬೇರುಗಳನ್ನು ತಿನ್ನುವುದರಿಂದ ಸಸಿಗಳು ಹಳದಿ ಬಣ್ಣಕ್ಕೆ ತಿರುಗಿ, ನಂತರ ಒಣಗುತ್ತವೆ. | ಏಪ್ರಿಲ್/ಮೇ ತಿಂಗಳಿನಲ್ಲಿ ಮಳೆಯಾದಾಗ ದುಂಬಿಗಳು ಸಾಯಂಕಾಲ 7 ರಿಂದ 7.30 ರ ವೇಳೆಗೆ ಭೂಮಿಯಿಂದ ಹೊರ ಬರುತ್ತವೆ. ದುಂಬಿಗಳನ್ನು ಸಾಮೂಹಿಕವಾಗಿ ಹಿಡಿದು ನಾಶ ಪಡಿಸುವುದು ಸುಲಭದ ಕೆಲಸ. ಇದನ್ನು ಕಾರ್ಯಗತ ಮಾಡಲು ಮಳೆ ಬಿದ್ದ ದಿನವೇ ಸಾಯಂಕಾಲ ಮರದ ಕಾಂಡಕ್ಕೆ ಬೇವಿನ ಸೊಪ್ಪನ್ನು ಕಟ್ಟಿ, 2 ಮಿ.ಲೀ ಕೋರೋಪೈರಿಫಾಸ್ 20 ಇ.ಸಿ.ಯನ್ನು ಒಂದು ಲೀಟರ್ ನೀರಿಗೆ ಸೇರಿಸಿ ಸಿಂಪರಿಸುವುದು. ಹೊರ ಬಂದ ದುಂಬಿಗಳು ಬೇವಿನ ಸೊಪ್ಪನ್ನು ತಿಂದು ಸಾಯುತ್ತವೆ. ಸಣ್ಣ ಸಸಿಗಳಲ್ಲಿ ಬಾಧೆ ಕಂಡುಬಂದಾಗ ಪ್ರತಿ ಲೀಟರ್ ನೀರಿಗೆ 10 ಮಿ.ಲೀ. ಕ್ಲೋರೋಪೈರಿಫಾಸ್ 20 ಇ.ಸಿ ಯನ್ನು ಸೇರಿಸಿ. ಜೂನ್ ತಿಂಗಳಿನಲ್ಲಿ ಗಿಡಗಳ ಬುಡಭಾಗಕ್ಕೆ ಸುರಿಯುವುದು. |
| **ನುಸಿ (ಇರಿಯೋಫಿಡ್ ನುಸಿ)** | ಅಸಂಖ್ಯಾತ ನುಸಿಗಳು 2 ರಿಂದ 6 ತಿಂಗಳ ವಯಸ್ಸಿನ ಕಾಯಿಗಳ ಪುಷ್ಪ ಪಾತ್ರೆಯಲ್ಲಿ ಸೇರಿಕೊಂಡು ರಸ ಹೀರುತ್ತಿರುತ್ತವೆ. ಕಾಯಿಗಳು ಬೆಳೆದಂತೆಲ್ಲಾ ಪುಷ್ಪ ಪಾತ್ರೆಯ ಕೆಳಭಾಗದಲ್ಲಿ ತ್ರಿಕೋನಾಕಾರದ ಹಳದಿ ಮಿಶ್ರಿತ ಬಿಳಿ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ನಂತರ ಉದ್ದನಾದ ಬಿರುಕುಗಳು ಉಂಟಾಗಿ, ಬಿರುಕುಗಳಿಂದ ಗೋಂದು ಹೊರ ಬರುತ್ತಿರುತ್ತದೆ. ಬಾಧೆಗೊಳಗಾದ ಎಳೆ ಕಾಯಿಗಳು ಉದುರುತ್ತವೆ. ಬಲಿತಕಾಯಿಗಳ ಜುಂಗು ಗಟ್ಟಿಗೊಳುತ್ತದೆ, ಕಾಯಿಗಳನ್ನು ಸುಲಿಯಲು ಕಷ್ಟ. | ಹತೋಟಿ ಕಷ್ಟಕರ ತೆಂಗಿನ ಮರಗಳಿಗೆ ನುಸಿ ನಿರೋಧಕ ಶಕ್ತಿ ಬರುವಂತೆ ಮರಗಳ ಪೋಷಣೆ ಅಗತ್ಯ. ಪ್ರತಿ ಮರಕ್ಕೆ ಶಿಫಾರಸ್ಸು ಮಾಡಿದ ಸಾರಜನಕ ಮತ್ತು ರಂಜಕಗಳ ಜೊತೆಗೆ ಜೂನ್/ಜುಲೈ ಮತ್ತು ನವೆಂಬರ್ ತಿಂಗಳುಗಳಲ್ಲಿ 3.5 ಕಿ.ಗ್ರಾಂ ಮ್ಯೂರೇಟ್ಆಫ್ಪೊಟ್ಯಾಷ್, ಒಂದು ಕಿ.ಗ್ರಾಂ ಜಿಪ್ಸಮ್, 50 ಗ್ರಾಂ. ಬೋರಾಕ್ಸ್ ಮತ್ತು 5 ಕಿ.ಗ್ರಾಂ ಬೇವಿನ ಹಿಂಡಿಗಳನ್ನು ಮಿಶ್ರಮಾಡಿ ಮಣ್ಣಿಗೆ ಸೇರಿಸಿ ನೀರು ಕೊಡುವುದು ಸಾಧ್ಯವಾದರೆ 2,3,4,5 ತಿಂಗಳ ವಯಸ್ಸಿನ ಕಾಯಿಗಳ ಗೊಂಚಲುಗಳ ಮೇಲೆ 4 ಗ್ರಾಂ, ನೀರಿನಲ್ಲಿ ಕರಗುವ ಗಂಧಕದ ಪುಡಿಯನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸುವುದು.<br>7.5 ಮಿ.ಲೀ ನೀಮ್‌ಜ಼ಾಲ್ ಅಥವಾ 10 ಮಿ.ಲೀ ಎಕೋನೀಮ್ ಮತ್ತು ಸಮ ಪ್ರಮಾಣದಲ್ಲಿ ನೀರನ್ನು ಸೇರಿಸಿ ಬೇರಿನ ಮೂಲಕ ಗಿಡಗಳಿಗೆ ಉಣಿಸುವುದು. (ಬೇರಿನ ಮೂಲಕ ಉಣಿಸುವ ವಿಧಾನಕ್ಕೆ ಕೋಷ್ಟಕದ ಕಪ್ಪು ತಲೆ ಗರಿ ತಿನ್ನುವ ಹುಳುವಿನ ಹತೋಟಿ ನೋಡಿ) |

| ಮುಖ್ಯ ರೋಗಗಳು | ಮುಖ್ಯವಾದ ಚಿಹ್ನೆಗಳು | ಹತೋಟಿ ಕ್ರಮಗಳು |
|---|---|---|
| ಕಾಂಡದಲ್ಲಿ ಸೋರುವ ರೋಗ | ನೆಲದಿಂದ 5–6 ಅಡಿ ಎತ್ತರದ ಕಾಂಡದಲ್ಲಿ ಕಂದು ಬಣ್ಣದ ಕಲೆಗಳು ಕಂಡು ಬಂದು, ಕುಳಿಯಂತಾಗಿ, ಬಿರುಕು ಬಿಟ್ಟು, ಅಂಟು ದ್ರವ ಹೊರ ಸೂಸುತ್ತವೆ. ಇಂತಹ ಹಲವಾರು ಬಿರುಕುಗಳು ವೃದ್ಧಿಗೊಂಡು ಕಾಂಡವನ್ನು ಬಲಹೀನವನ್ನಾಗಿ ಮಾಡುತ್ತವೆ. ಇಳುವರಿ ಕಡಿಮೆ ಆಗುತ್ತದೆ. ಗಿಡಗಳು ಒಣಗಿ ಸಾಯಲೂಬಹುದು. | ಈ ರೋಗಕ್ಕೆ ತುತ್ತಾದ ಭಾಗವನ್ನು ಹರಿತವಾದ ಬಾಚಿಯಿಂದ ಕೆತ್ತಿ ಅದನ್ನು ತೊಳೆದು, ನಂತರ ಶೇ.1ರ ಬೋರ್ಡೋ ದ್ರಾವಣ ಲೇಪಿಸಬೇಕು.<br>ಪ್ರತಿ ಗಿಡಕ್ಕೆ 5 ಕಿ.ಗ್ರಾಂ. ನಂತೆ ಬೇವಿನ ಹಿಂಡಿಯನ್ನು ಮಡಿಗಳಲ್ಲಿನ ಮಣ್ಣಿಗೆ ಸೇರಿಸಬೇಕು. ಬಸಿಗಾಲುವೆ ವ್ಯವಸ್ಥೆ ಮಾಡಬೇಕು. ಈ ಉಪಚಾರವನ್ನು ಏಪ್ರಿಲ್–ಮೇ, ಸೆಪ್ಟೆಂಬರ್–ಅಕ್ಟೋಬರ್ ಮತ್ತು ಜನವರಿ–ಫೆಬ್ರುವರಿ ತಿಂಗಳುಗಳಲ್ಲಿ ಕೊಡಬೇಕು. |
| ಅಣಬೆರೋಗ | ನಿರ್ಲಕ್ಷಿಸಿದ ತೋಟಗಳಲ್ಲಿ ಈ ರೋಗದ ಬಾಧೆ ಹೆಚ್ಚು, ಇದರಿಂದಾಗಿ ಮರಗಳ ಇಳುವರಿ ಕ್ರಮೇಣ ಕುಂಠಿತಗೊಂಡು ನಿಸ್ತೇಜಗೊಳ್ಳುತ್ತವೆ. ನೆಲದ ಹತ್ತಿರದ ಕಾಂಡದ ಮೇಲೆ ಅಣಬೆಯಾಕಾರದ ಶಿಲೀಂಧ್ರದ ಬೆಳವಣಿಗೆ ಕಂಡು ಬರುತ್ತದೆ. ಬೇರುಗಳು ತೀವ್ರ ಬಾಧೆಗೊಳಗಾಗಿ, ಬೆಳವಣಿಗೆ ಕುಂಠಿತಗೊಳ್ಳುತ್ತದೆ. | ಅಣಬೆ ರೋಗಕ್ಕೆ ತುತ್ತಾದ ಮರಗಳನ್ನು ಕಿತ್ತು ಸುಡಬೇಕು, ನಂತರ ಆ ಪ್ರದೇಶಕ್ಕೆ 100 ಗ್ರಾಂ. ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ 100 ಗ್ರಾಂ ಕ್ಯಾಪ್ಟಾನ್ 80 ಡಬ್ಲ್ಯೂ.ಪಿ. ಅಥವಾ 30 ಮಿ.ಲೀ. ಥೈರಾಮ್ ಅಥವಾ 1.5 ಮಿ.ಲೀ.ಆರಿಯೋಫಂಜಿನ್ ಶಿಲೀಂಧ್ರನಾಶಕದ ದ್ರಾವಣವನ್ನು ಸುಮಾರು 3 ಅಡಿ ಆಳದ ತಗ್ಗಿನಲ್ಲಿ ಕೊಡಬೇಕು. ಒಂದು ತಿಂಗಳ ನಂತರ ಮಣ್ಣು ಮುಚ್ಚಬೇಕು.<br>ಅಣಬೆ ರೋಗಕ್ಕೆ ತುತ್ತಾದ ಮರಗಳಿಗೆ 3 ಮಿ.ಲೀ. ಹೆಕ್ಸಾಕೋನಝೋಲ್ ಪ್ರತಿ 100 ಮಿ.ಲೀ. ನೀರಿಗೆ ಬೆರೆಸಿ ಮೂರು ತಿಂಗಳಿಗೊಮ್ಮೆ ಬೇರಿನ ಮೂಲಕ ಕೊಡುವುದು.<br>ಬೇವಿನ ಹಿಂಡಿ (ವರ್ಷಕ್ಕೆ ಪ್ರತಿ ಗಿಡಕ್ಕೆ 5 ಕಿ.ಗ್ರಾಂ) ಮತ್ತು 50 ಗ್ರಾಂ *ಟ್ರೈಕೋಡರ್ಮಾ ವಿರಿಡೆ* ಜೈವಿಕ ಪುಡಿಯನ್ನು 10 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ (ಪ್ರತಿ ಮರಕ್ಕೆ ಆರು ತಿಂಗಳಿಗೊಮ್ಮೆ) ಮರದ ಬುಡದ ಸುತ್ತಲೂ ಅಗೆದು, ಮಣ್ಣಿಗೆ ಹಾಕಬೇಕು. ಈ ಉಪಚಾರವನ್ನು ಕನಿಷ್ಠ ಎರಡು ವರ್ಷ ಮಾಡಬೇಕು. |
| ಸುಳಿಮೊಗ್ಗು ಕೊಳೆಯುವ ರೋಗ (ಸುಳಿ ಕೊಳೆ) (ಬಡ್ ರಾಟ್) | ಗಿಡದ ಸುಳಿಯಲ್ಲಿನ ಎಲೆಗಳಲ್ಲಿ ಪತ್ರ ಹರಿತ್ತು ಕಡಿಮೆಯಾಗಿ ಹಳದಿ ವರ್ಣಕ್ಕೆ ತಿರುಗಿ, ಜೋತು ಅವು ಬೀಳುತ್ತವೆ ಹಾಗೂ ಅವು ಒಂದೊಂದಾಗಿ ಒಣಗಿ ಬೀಳುತ್ತವೆ. ಸುಳಿಯು ಮೃದುವಾಗಿ, ಒಣಗಿ ಸಾಯುತ್ತದೆ. | ರೋಗ ಪೀಡಿತ ಸುಳಿಯ ಭಾಗವನ್ನು ಕೆರೆದು ತೆಗೆದು ಸ್ವಚ್ಛಗೊಳಿಸಿ, ನಂತರ ಆ ಭಾಗಕ್ಕೆ ಮೆಟಲಾಕ್ಸಿಲ್+ಮ್ಯಾಂಕೋಜೆಬ್‌ಗಳನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿದ ದ್ರಾವಣ ಅಥವಾ ಶೇ. 1ರ ಬೋರ್ಡೋ ಪೇಸ್ಟ್‌ಅನ್ನು ಲೇಪಿಸಿ, ಮಳೆಯ ನೀರು ಬೀಳದಂತೆ ರಕ್ಷಿಸಬೇಕು. |
| ಎಲೆ ಚುಕ್ಕೆ ರೋಗ (ಪೆಸ್ಟಲೋಷಿಯಾ) | ಗರಿಗಳ ಮೇಲೆ ಕಪ್ಪು ಚುಕ್ಕೆಗಳು ಕಂಡು ಬಂದು, ವೃದ್ಧಿಯಾಗಿ ಹರಡಿ ಎಲೆಗಳು ಒಣಗುವಂತೆ ಮಾಡುತ್ತವೆ. ಮಳೆಗಾಲದಲ್ಲಿ ಈ ರೋಗದ ಬಾಧೆ ತೀವ್ರವಿರುತ್ತದೆ. | ಎಲೆ ಚುಕ್ಕೆ ರೋಗದ ಬಾಧೆಯನ್ನು ತಡೆಯಲು 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಶೇ. 50 ಡಬ್ಲ್ಯೂ.ಪಿ. ಅನ್ನು 1 ಲೀಟರ್ ನೀರಿನಲ್ಲಿ ಕರಗಿಸಿ ಎಲೆಗಳ ಮೇಲೆ ಸಿಂಪಡಿಸಬೇಕು. ಇದೇ ದ್ರಾವಣದ ಸಿಂಪರಣೆಯಿಂದ ಸುಳಿಮೊಗ್ಗು ಕೊಳೆಯುವ ರೋಗ (ಬಡ್‌ರಾಟ್) ಹತೋಟಿಯಾಗುವುದು. |